
# ಮಿಮಿಗೆ ಇನ್ನೊಂದು ಮನೆಯೇ?







ಒಂದು ದಿನ, ಮಿಸೆಸ್ ಕರಡಿ/ಬೇರ್ ಮಿಮಿಯನ್ನು ಒಳಗೆ ಕರೆದಾಗ ಮಿಮಿ ಜೋಕಾಲಿಯಲ್ಲಿ ಆಡುತ್ತಿದ್ದಳು.




"ಮಿಮಿ, ನಿನಗೆ ಹೊಸ ಮನೆಗೆ ಹೋಗುವುದೆಂದರೆ ಇಷ್ಟವಿದೆಯಾ?"ಎಂದು ಅವಳು ಕೇಳಿದಳು."ಆದರೆ ನನಗೆ ಈಗಾಗಲೇ ಒಂದು ಮನೆಯಿದೆ...ಇದು," ಎಂದಳು ಮಿಮಿ ತುಂಬಾ ಆಶ್ಚರ್ಯದಿಂದ. "ಹೌದು ನಿನಗೆ ಇದೆ...ಹಾಗೂ ನೀನು ಇಲ್ಲಿ ನಮ್ಮ ಮನೆಯಲ್ಲಿರುವುದು ನಮಗೂ ಇಷ್ಟ. ಆದರೆ ನಿನ್ನ ಆರೈಕೆ ಮಾಡಲು ನಿನಗಾಗಿಯೇ ಒಬ್ಬ ತಾಯಿ ಹಾಗೂ ತಂದೆಯಿರುವ ಇನ್ನೊಂದು ಕುಟುಂಬದ ಜೊತೆಗೆ ಹೋಗುವುದರ ಬಗ್ಗೆ ನಿನಗೆ ಹೇಗೆನ್ನಿಸುತ್ತದೆ...? ಎಂದು ಮಿಸೆಸ್. ಕರಡಿ/ಬೇರ್ ಕೇಳಿದಳು.

"ಆದರೆ ನನಗೆ ಮುಂಚೆಯೇ ಒಬ್ಬ ತಾಯಿ ಹಾಗೂ ತಂದೆಯಿದ್ದರು..ಆದರೆ ಈಗ ಹೇಗೆ ಇನ್ನೊಬ್ಬ ತಂದೆ ಹಾಗೂ ತಾಯಿ ಬೇಕು?"

"ಹೌದು, ನಿನಗೆ ಮೊದಲು ಒಬ್ಬ ತಂದೆ ಹಾಗೂ ತಾಯಿ ಇದ್ದರು-ನನಗೆ ಗೊತ್ತಿದೆ ನೀನು ಎಷ್ಟು ಅವರನ್ನು ಪ್ರೀತಿಸುತ್ತಿದ್ದಿ ...ಹಾಗೂ ನೀನು ಈಗಲೂ ಅವರನ್ನು ನೆನಪಿಸಿಕೊಳ್ಳುತ್ತೀ ಹಾಗೂ ಕೆಲವೊಮ್ಮೆ ಅವರನ್ನು ಕಳೆದುಕೊಂಡ ನೋವು ಇದೆ ಎಂದು. ಆದರೆ ನಾವು ಪ್ರಯತ್ನಪಟ್ಟರೂ, ನಮಗೆ ನಿನ್ನ ತಂದೆಯನ್ನು ಹುಡುಕಲು ಸಾಧ್ಯವಾಗಲಿಲ್ಲ. ನಿನಗೆ ಇನ್ನೊಬ್ಬ ತಂದೆ ತಾಯಿಯನ್ನು ಪಡೆಯುವ ಆಸೆಯಿದೆಯೇ ಎಂದು ನಾನು ಕೇಳುತ್ತಿದ್ದೇನೆ...ಅವರು ಬೇರೆಯ ರೀತಿಯಾಗಿರಬಹುದು ಆದರೂ ನಿನ್ನ ಹೆತ್ತವರಂತೆ ಹಾಗೂ ನಾವು ಇಲ್ಲಿ ಈ ಮನೆಯಲ್ಲಿ ನಿನ್ನನ್ನು ನೋಡಿಕೊಂಡಂತೆ ಅವರು ನಿನ್ನನ್ನು ಬಹಳ ಪ್ರೀತಿಸುತ್ತಾರೆ ಹಾಗೂ ಆರೈಕೆ ಮಾಡುತ್ತಾರೆ.




ಮಿಮಿಗೆ ಹೆದರಿಕೆ ಆಯ್ತು ಹಾಗೂ ಅವಳಿಗೆ ಏನು ಹೇಳಬೇಕೆಂದು ಗೊತ್ತಾಗಲಿಲ್ಲ. ಇನ್ನೊಂದು ಮನೆ? ಹೊಸ ತಂದೆ ತಾಯಿ?
ತಾನು ಯಾವಾಗಲೂ ಭೇಟಿ ಮಾಡಿಲ್ಲದ ಹಾಗೂ ಪರಿಚಯ ಇಲ್ಲದ ತಾಯಿ ತಂದೆಗಳು? ತಾನು ಸುರಕ್ಷಿತವಾಗಿರುತ್ತೇನೆಯೇ?
ಅವರು ನಿಜವಾಗಿ ನನ್ನನ್ನು ಪ್ರೀತಿ ಮಾಡುತ್ತಾರಾ, ನಿಜವಾಗಿ ನನ್ನನ್ನು ಆರೈಕೆ ಮಾಡುತ್ತಾರಾ?
ಅವರು ನನ್ನ ಹೆತ್ತವರಿಗಿಂತ ತುಂಬಾ ಬೇರೆಯ ರೀತಿಯಿದ್ದರೆ... ಆಗ ಏನು ಮಾಡುವುದು?



ಹೊಸ ತಾಯಿ ಮತ್ತು ತಂದೆಯಾದ ಮಿಸ್ಟರ್ ಹಾಗೂ ಮಿಸೆಸ್ ಜಿರಾಫೆಗಳನ್ನು ಮಿಮಿ
ಭೇಟಿಯಾಗುವುದು ಒಳ್ಳೆಯದೆಂದು ಮಿಸೆಸ್. ಕರಡಿ/ಬೇರ್ ಹೇಳಿದಳು.
"ಅವರೊಡನೆ ಕೆಲವು ಸಮಯ ಕಳೆದು, ಅವರೊಡನೆ ಹೋಗಿ ವಾಸಿಸಬೇಕೆಂದು ನಿನಗೆ
ಅನ್ನಿಸಿದ ನಂತರವೇ ನಾನು ನಿನ್ನನ್ನು ಅವರ ಮನೆಗೆ ಕಳುಹಿಸುವುದು...ಇಲ್ಲದಿದ್ದರೆ ಇಲ್ಲ,"
ಎಂದು ಮಿಸೆಸ್ ಕರಡಿ/ಬೇರ್ ವಿವರಿಸಿದಳು. ಹಾಗಾಗಿ, ಮಿಮಿ ತನ್ನ ಹೊಸ ಪೋಷಕರನ್ನು
ಮೊದಲ ಸಲ ಭೇಟಿ ಮಾಡಿದಳು. ಮಿಸ್ಟರ್ ಹಾಗೂ ಮಿಸೆಸ್ ಜಿರಾಫೆ ಇಬ್ಬರೂ ತುಂಬಾ
ಎತ್ತರವಿದ್ದರು ಹಾಗೂ ಅವರನ್ನು ನೋಡಿ ಮಿಮಿಗೆ ಅವರನ್ನು ನೋಡಿ ಭಯವಾಯಿತು.ಅವರು
ತುಂಬಾ ವಿಚಿತ್ರ ಹಾಗೂ ಬೇರೆ ರೀತಿಯಾಗಿದ್ದಾರೆ!ಅವರು ತಾನು ತಿಳಿದ ಹೆತ್ತವರಿಗಿಂತ ಬೇರೆ
ರೀತಿಯಾಗಿದ್ದಾರೆ ಎಂದು ಅವಳಿಗೆ ಕಾಣಿಸಿತು.






"ಹಲೋ ಮಿಮಿ, ನಿನ್ನನ್ನು ಭೇಟಿ ಮಾಡಲು ನಮಗೆ ತುಂಬಾ ಸಂತೋಷವಾಗುತ್ತಿದೆ," ಎಂದು
ಅವಳ ಕೈಗಳನ್ನು ಕುಲುಕುತ್ತಾ ಅವರು ಹೇಳಿದರು. ಮಿಮಿಯು ಮೌನವಾಗಿದ್ದಳು...ಆಮೇಲೆ
ಅವಳು ಅಳಲು ಪ್ರಾರಂಭಿಸಿದಳು.
"ಅಳಬೇಡ, ನಾವು ನಿನಗೆ ಹೆದರಿಕೆ ಹಾಗೂ ದುಃಖ ತರಬೇಕೆಂಬ ಅರ್ಥದಿಂದ ಹೇಳಿದ್ದಲ್ಲ,"
ಎಂದು ಅವಳ ಕೈಗಳನ್ನು ಮೃದುವಾಗಿ ತಟ್ಟುತ್ತಾ ಮಿಸೆಸ್ ಜಿರಾಫೆ ಹೇಳಿದಳು.
"ಯಾಕೆ ನಾವು ಮೊದಲಿಗೆ ಒಂದು ಆಟವನ್ನು ಆಡುತ್ತಾ ಒಬ್ಬರನ್ನೊಬ್ಬರು ಅಥ-
ರ್ಮಾಡಿಕೊಳ್ಳಬಾರದು," ಎಂದು ಮಿಸ್ಟರ್ ಜಿರಾಫೆ ಸಲಹೆ ನೀಡಿದನು.





ನಂತರದ ಕೆಲವು ದಿನಗಳ ವರೆಗೆ ಮಿಸ್ಟರ್.ಮತ್ತು ಮಿಸೆಸ್ ಜಿರಾಫೆ ಮಿಮಿಯನ್ನು ನೋಡಲು ದಿನವೂ ಬರುತ್ತಿದ್ದರು.ಅವರು ಅವಳೊಂದಿಗೆ ಚೆಂಡಾಟ ಆಡಿದರು, ಉದ್ಯಾನದಲ್ಲಿ ಒಂದು ನಡಿಗೆ ಹೋದರು ಹಾಗೂ ಮನೆಯಲ್ಲಿ ಮಿಮಿಯ ಸ್ನೇಹಿತರನ್ನು ಭೇಟಿ ಮಾಡಿದರು.
ಅವಳೊಂದಿಗಿರುವುದು ತಮಗೆ ಎಷ್ಟು ಇಷ್ಟ ಎಂದು ಅವರು ಅವಳಿಗೆ ಹೇಳಿದರು.




ಮಿಸ್ಟರ್ ಮತ್ತು ಮಿಸೆಸ್ ಜಿರಾಫೆ ಅವಳೊಂದಿಗೆ ಆಟಗಳನ್ನು ಆಡಿದರು ಹಾಗೂ ಅವಳಿಗೆ ಕಥೆಗಳನ್ನು ಹೇಳಿದರು.ಅವರು ಅವಳಿಗೆ ತಮ್ಮ ಬಗ್ಗೆ ಹಾಗೂ ತಮ್ಮ ಮನೆಯ ಬಗ್ಗೆಯೂ ಸ್ವಲ್ಪ ಹೇಳಿದರು: "ನಾವು ಕಾಡಿನ ತುದಿಯಲ್ಲಿ ಗೋಪುರದಂತೆ ಕಾಣುವ ಒಂದು ಮರದ ಮನೆಯಲ್ಲಿ ವಾಸ ಮಾಡುತ್ತೇವೆ: ನಮಗೆ ಮಕ್ಕಳಿಲ್ಲ ಆದರೆ ನಮಗೆ ಒಂದು ಮಗು ಬೇಕೆಂಬ ಆಸೆ ಇದೆ. ಹಾಗಾಗಿ, ನೀನು ನಮ್ಮೊಂದಿಗೆ ವಾಸಿಸಲು ಮನಸ್ಸು ಮಾಡಿದ್ದೇಕೆ.ನಾವು ಒಂದು ಸಂತೋಷದಿಂದ ಇರುವ ಕುಟುಂಬವಾಗುತ್ತೇವೆಂದು ನಮಗೆ ಆಸೆ."




ಕೆಲವು ವಾರಗಳಾದ ನಂತರ, ಮಿಸೆಸ್ ಕರಡಿ ಮಿಮಿ ಇನ್ನೊಂದು ಮನೆಗೆ ಹೋಗಲು ಸಿದ್ಧವಾಗಿದ್ದಿದೂ ಎಂದು ಅವಳನ್ನು ಕೇಳಿದಳು. "ಹೌದು", ಮಿಮಿ ಹೇಳಿದಳು. "ನನಗೆ ಮಿಸ್ಟರ್ ಮತ್ತು ಮಿಸೆಸ್ ಜಿರಾಫೆಯೊಂದಿಗೆ ಅವರ ಮಗಳಾಗಿ ಇರಲು ಇಷ್ಟವಿದೆಯೆಂದು ನನಗೆ ಅನ್ನಿಸುತ್ತಿದೆ." "ನಾವು ಮಿಮಿಯ ಹೊಸ ಅಮ್ಮ ಅಪ್ಪ ಆಗಲಿದ್ದೇವೆಂದು ನಮಗೆ ಬಹಳ ಸಂತೋಷವಾಗುತ್ತಿದೆ.- ಎಲ್ಲದಕ್ಕಿಂತ ಹೆಚ್ಚಾಗಿ ನಮಗೆ ಅದೇ ಬೇಕಾಗಿತ್ತು."ಎಂದು ನಗುತ್ತಾ ಮಿಸ್ಟರ್ ಜಿರಾಫೆ ಹೇಳಿದ. "ನಿನ್ನನ್ನು ನಮ್ಮ ಮನೆಗೆ..ನಿನ್ನ ಹೊಸ ಮನೆಗೆ... ಕರೆದುಕೊಂಡು ಹೋಗಲು...ಅಲ್ಲಿ ನಿನ್ನನ್ನು ನಮ್ಮ ಕುಟುಂಬದ ಇತರರಿಗೆ ಪರಿಚಯ ಮಾಡಿಸಲು ನನಗೆ ಆತುರವಾಗುತ್ತಿದೆ."ಎಂದು ಸಂಭ್ರಮದಿಂದ ಮಿಸೆಸ್ ಜಿರಾಫೆ ಹೇಳಿದಳು.




ಮಿಮಿ ತಮ್ಮನ್ನು ಬಿಟ್ಟು ಹೋಗುತ್ತಾಳೆಂದು ಎಲ್ಲರಿಗೂ ದುಃಖವಾಯಿತು ಆದರೂ ಅವಳಿಗೆ ವಾಸಿಸಲು ಹೊಸ ಮನೆ ಹಾಗೂ ಕುಟುಂಬ ಸಿಕ್ಕಿತು ಎಂದು ಅವರಿಗೆ ಸಂತೋಷವಾಯಿತು.
ಮಿಮಿಗೂ ನಾನು ಮಿಸೆಸ್. ಕರಡಿ ಹಾಗೂ ಮಿಸೆಸ್. ಜಿಂಕೆ, ಮತ್ತು ಮಿಸೆಸ್ ಜಂಬೋ...ಹಾಗೂ ತನ್ನ ಎಲ್ಲಾ ಸ್ನೇಹಿತರನ್ನೂ ವಿಶೇಷವಾಗಿ ಟಿಂಗುವನ್ನು ಬಿಟ್ಟು ಹೋಗುತ್ತಿದ್ದೇನೆಂದು ಬಹಳ ಬೇಸರವಾಯಿತು. ಆದರೆ ತನಗೆ ಪೋಷಕರು ಮತ್ತು ಒಂದು ಕುಟುಂಬ ಸಿಗುತ್ತದೆಂದು ಅವಳು ಸಂಭ್ರಮಗೊಂಡಿದ್ದಳು.
ತಾನು ಸಾಧ್ಯವಾದಾಗಲೆಲ್ಲಾ  ಮಿಸೆಸ್ ಕರಡಿ/ಬೇರ್ ಹಾಗೂ ತನ್ನ ಸ್ನೇಹಿತರನ್ನು ನೋಡಲು ಬರುತ್ತಿರುತ್ತೇನೆ ಎಂದು ಭರವಸೆ ಕೊಟ್ಟಳು.

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ
ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ, ಬೆಂಗಳೂರು-560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್